# ಹರಿಕಥಾಮೃತಸಾರ - ೦೩

## ವ್ಯಾಪ್ತಿ ಸಂಧಿ

ಹರಿಕಥಾಮೃತಸಾರ ಗುರುಗಳ | ಕರುಣದಿಂದಾಪನಿತು ಪೇಳುವೆ |
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ||

ಪುರುಷರೂಪತ್ರಯ ಪುರಾತನ | ಪುರುಷ ಪುರುಷೋತ್ತಮ್ಮ ಕ್ಷರಾಕ್ಷರ |
ಪುರುಷಪೂಜಿತಪಾದ ಪೂರ್ಣಾನಂದಜ್ಞಾನಮಯ ||
ಪುರುಷಸೂಕ್ತಸುಮೇಯ ತತ್ತತ್ಪುರುಷ ಹೃತ್ಪುಷ್ಕರನಿಲಯ ಮಹ |
ಪುರುಷಜಾಂಡಾಂತರದಿ ಬಹಿರದಿ ವ್ಯಾಪ್ತ ನಿರ್ಲಿಪ್ತ || || ೦೩-೦೧||

ಸ್ತ್ರೀ ನಪುಂಸಕ ಪುರುಷ ಭೂ ಸಲಿ|ಲಾನಲಾನಿಲ ಗಗನ ಮನ ಶಶಿ |
ಭಾನು ಕಾಲ ಗುಣ ಪ್ರಕೃತಿಯೊಳಗೊಂದು ತಾನಲ್ಲ ||
ಏನು ಇವನ ಮಹಾಮಹಿಮೆ ಕಡೆ|ಗಾಣರಜಭವಶಕ್ರಮುಖರು ನಿ |
ಧಾನಿಸಲು ಮಾನವರಿಗಳವಡುವದೇ ವಿಚಾರಿಸಲು || ||೦೩-೦೨||

ಗಂಧ ರಸ ರೂಪ ಸ್ಪರುಶ ಶಬ್ದೊಂದು ತಾನಲ್ಲದರದರ ಪೆಸ |
ರಿಂದ ಕರೆಸುತ ಜೀವರಿಗೆ ತರ್ಪಕನು ತಾನಾಗಿ ||
ಪೊಂದಿಕೊಂಡಿಹ ಪರಮ ಕರುಣಾ|ಸಿಂಧು ಶಾಶ್ವತ ಮನವೆ ಮೊದಲಾ |
ದಿಂದ್ರಿಯಗಳೊಳಗಿದ್ದು ಭೋಗಿಸುತಿಹನು ವಿಷಯಗಳ || ||೦೩-೦೩||

ಶ್ರವಣ ನಯನ ಘ್ರಾಣ ತ್ವಗ್ರಸ | ನಿವುಗಳಲಿ ವಾಕ್ ಪಾಣಿ ಪಾದಾ |
ದ್ಯವಯವಗಳಲಿ ತದ್ಗುಣಗಳಲಿ ತತ್ಪತಿಗಳೊಳಗೆ ||
ಪ್ರವಿತತನು ತಾನಾಗಿ ಕೃತಿಪತಿ | ವಿವಿಧಕರ್ಮವ ಮಾಡಿ ಮಾಡಿಸಿ |
ಭವಕೆ ಕಾರಣನಾಗಿ ತಿರುಗಿಸುತಿಹನು ತಿಳಿಸದಲೆ || || ೦೩-೦೪||

ಗುಣಿ ಗುಣಗಳೊಳಗಿದ್ದು ಗುಣಿಗುಣ|ನೆನಿಸುವನು ಗುಣ ಬದ್ಧನಾಗದೇ |
ಗುಣಜ ಪುಣ್ಯಾಪುಣ್ಯಫಲ ಬ್ರಹ್ಮಾದಿಚೇತನಕೆ ||
ಉಣಿಸುತವರೊಳಗಿದ್ದು ವೃಜಿನಾ|ರ್ದನ ಚಿದಾನಂದೈಕದೇಹನು |
ಕೊನೆಗೆ ಸಚರಾಚರಜಗದ್ಭುಕುವನಿಪನವ್ಯಯನು || || ೦೩-೦೫||

ವಿದ್ಯೇ ತಾನೆಂದೆನಿಸಿಕೊಂಬನಿ|ರುದ್ಧದೇವನು ಸರ್ವಜೀವರ |
ಬುದ್ಧಿಯೊಳ್ ನೆಲೆಸಿದ್ದು ಕೃತಿಪತಿ ಬುದ್ಧಿಯೆನಿಸುವನು ||
ಸಿದ್ಧಿ ಯೆನಿಸುವ ಸಂಕರುಷಣ ಪ್ರ|ಸಿದ್ಧನಾಮಕ ವಾಸುದೇವನ |
ವದ್ಯರೂಪಚತುಷ್ಟಯಗಳರಿತವನೆ ಪಂಡಿತನು || || ೦೩-೦೬||

ತನುಚತುಷ್ಟಯಗಳೊಳು ನಾರಾ|ಯಣನು ಹೃತ್ಕಮಲಾಖ್ಯ ಸಿಂಹಾ |
ಸನದೊಳನಿರುದ್ಧಾದಿ ರೂಪಗಳಿಂದ ಶೋಭಿಸುತ ||
ತನಗೆ ತಾನೇ ಸೇವ್ಯ ಸೇವಕ|ನೆನಿಸಿ ಸೇವಾಸಕ್ತ ಸುರರೊಳ |
ಗನವರತ ನೆಲೆಸಿದ್ದು ಸೇವೆಯ ಕೈಕೊಂಬನವರಂತೆ || || ೦೪-೦೭||

ಜಾಗರ ಸ್ವಪ್ನಂಗಳೊಳು ವರ|ಭೋಗಿಶಯನ ಬಹು ಪ್ರಕಾರ ವಿ |
ಭಾಗಗೈಸಿ ನಿರಂಶಜೀವರ ಚಿತ್ಶರೀರವನು ||
ಭೋಗವಿತ್ತು ಸುಷುಪ್ತಿಕಾಲದಿ | ಸಾಗರವ ನದಿ ಕೂಡುವಂತೇ ವಿ |
ಯೋಗರಹಿತನು ಅಂಶಗಳನೇಕತ್ರವೈದಿಸುವ || || ೦೪-೦೮||

ಭಾರ್ಯರಿಂದೊಡಗೂಡಿ ಕಾರಣ | ಕಾರ್ಯವಸ್ತುಗಳಲ್ಲಿ ಪ್ರೇರಕ |
ಪ್ರೇರ್ಯ ರೂಪಗಳಿಂದ ಪಟತಂತುಗಳವೋಲಿದ್ದು ||
ಸೂರ್ಯಕಿರಣಗಳಂತೆ ತನ್ನಯ | ವೀರ್ಯದಿಂದಲಿ ಕೋಡುತ ಕೊಳುತಿಹ |
ನಾರ್ಯರಿಗೇ ಈತನ ವಿಹಾರವು ಗೋಚರಿಪುದೇನೋ || || ೦೪-೦೯||

ಜನಕ ತನ್ನಾತ್ಮಜಗೆ ವರ ಭೂ|ಷಣ ದುಕೂಲವ ತೊಡಿಸಿ ತಾ ವಂ |
ದನೆಯ ಕೈಕೊಳುತವನ ಹರಸುತ ಹರುಷಬಡುವಂತೆ ||
ವನರುಹೇಕ್ಷಣ ಪೂಜ್ಯ ಪೂಜಕ|ನೆನಿಸಿ ಪೂಜಾ ಸಾಧನಪದಾ |
ರ್ಥನು ತನಗೇ ತಾನಾಗಿ ಫಲಗಳನೀವ ಭಜಕರಿಗೆ || || ೦೪-೧೦||

ತಂದೆ ಬಹುಸಂಭ್ರಮದಿ ತನ್ನಯ|ಬಂಧು ಬಳಗವ ನೆರಹಿ ಮದುವೆಯ |
ನಂದನಗೆ ತಾ ಮಾಡಿ ಮನೆಯೊಳಗಿಡುವ ತೆರನಂತೆ ||
ಇಂದಿರಾಧವ ತನ್ನ ಇಚ್ಛೇಗ|ಳಿಂದ ಗುಣಗಳ ಚೇತನಕೆ ಸಂ |
ಬಂಧಗೈಸಿ ಸುಖಾಸುಖಾತ್ಮಕ ಸಂಸೃತಿಯೊಳಿಡುವ || ||೦೪-೧೧||

ತೃಣಕೃತಾಲಯ ದೊಳಗೆ ಪೊಗೆ ಸಂ|ದಣಿಸಿ ಪ್ರತಿ ಛಿದ್ರದಲಿ ಪೊರಮ |
ಟ್ಟನಲನಿರವನು ತೋರಿ ತೊರದಲಿಪ್ಪ ತೆರನಂತೆ ||
ವನಜಜಾಂಡದೊಳಖಿಳ ಜೀವರ|ತನುವಿನೊಳಹೊರಗಿದ್ದು ಕಾಣಿಸ |
ದನಿಮಿಷೇಶನು ಸಕಲ ಕರ್ಮವ ಮಾಳ್ಪನವರಂತೆ || ||೦೪-೧೨||

ಪಾದಪಗಳಡಿಗೆರೆಯೆ ಸಲಿಲವು | ತೋದು ಕೊಂಬೆಗಳುಬ್ಬಿ ಪುಷ್ಪ |
ಸ್ವಾದು ಫಲವೀವಂದದಲಿ ಸರ್ವೇಶ್ವರನು ಜನರಾ ||
ರಾಧನೆಯ ಕೈಕೊಂಡು ಬ್ರಹ್ಮ ಭ|ವಾದಿಗಳ ನಾಮದಲಿ ಫಲವಿ |
ತ್ತಾದರಿಸುವನು ತನ್ನ ಮಹಿಮೆಯತೋರಗೊಡ ಜಗಕೆ || ||೦೪-೧೩||

ಶ್ರುತಿತತಿಗಳಿಗೆ ಗೋಚರಿಸದ । ಪ್ರತಿಮಜಾನಂದಾತ್ಮನಚ್ಯುತ ।
ವಿತತ ವಿಶ್ವಾಧಾರ ವಿದ್ಯಾಧೀಶ ವಿಧಿಜನಕ ॥
ಪ್ರತಿದಿವಸ ಚೇತನರೊಳಗೆ ಪ್ರಾಕೃತಪುರುಷನಂದದಲಿ ಸಂಚರಿ ।
ಸುತ ನಿಯಮ್ಯನಿಯಾಮಕನು ತಾನಾಗಿ ಸಂತೈಪ ॥ ॥೦೩-೧೪॥

ಮನ ವಿಷಯದೊಳಗಿರಿಸಿ ವಿಷಯವ । ಮನದೊಳಗೆ ನೆಲೆಗೊಳಿಸಿ ಬಲು ನೂ ।
ತನವು ಸುಸಮೀಚೀನವಿದುಪಾದೇಯವೆಂದರುಪಿ ॥
ಕನಸಿಲಾದರು ತನ್ನ ಪಾದವ । ನೆನೆವನೀಯದೆ ಸರ್ವರೊಳಗಿ ।
ದ್ದನುಭವಿಸುವನು ಸ್ಥೂಲವಿಷಯ ವಿಶ್ವನೆಂದನಿಸಿ ॥ ॥೦೩-೧೫॥

ತೋದಕನು ತಾನಾಗಿ ಮನ ಮೊದಲಾದ ಕರಣದೊಳಿದ್ದು ವಿಷಯವ ।
ನೈದುವನು ನಿಜಪೂರ್ಣಸುಖಮಯ ಗ್ರಾಹ್ಯ ಗ್ರಾಹಕನು ॥
ವೇದವೇದ್ಯನು ತಿಳಿಯದವನೋಪಾದಿ ಭುಂಜಿಸುತೆಲ್ಲರೊಳಗಾ ।
ಹ್ಲಾದ ಪಡುವನು ಭಕ್ತ ವತ್ಸಲ ಭಾಗ್ಯಸಂಪನ್ನ ॥ ॥೦೩-೧೬॥

ನಿತ್ಯ ನಿಗಮಾತೀತ ನಿರ್ಗುಣ । ಭೃತ್ಯವತ್ಸಲ ಭಯವಿನಾಶನ ।
ಸತ್ಯಕಾಮ ಶರಣ್ಯ ಶ್ಯಾಮಲ ಕೋಮಲಾಂಗ ಸುಖಿ ॥
ಮತ್ತನಂದದಿ ಮರ್ತ್ಯರೊಳಹೊರಗಿತ್ತ ನೋಡಲು ಸುತ್ತಲಿಪ್ಪನು ।
ಅತ್ಯಧಿಕ ಸಂತೃಪ್ತ ತ್ರಿಜಗದ್ವ್ಯಾಪ್ತ ಪರಮಾಪ್ತ ॥ ॥೦೩-೧೭॥

ಪವಿ ಹರಿನ್ಮಣಿ ವಿದ್ರುಮದ ಸಟ್ಟುವಿಗಳಂದದಿ ರಾಜಿಸುತ ಮಾ ।
ಧವ ನಿರಂತರ ದೇವದಾನವಮಾನವರೊಳಿದ್ದು ॥
ತ್ರಿವಿಧಗುಣ ಕರ್ಮ ಸ್ವಭಾವವ । ಪವನಮುಖ ದೇವಾಂತರಾತ್ಮಕ ।
ದಿವಸದಿವಸದಿ ವ್ಯಕ್ತ ಮಾಡುತಲವರೊಳಿದ್ದುಣಿಪ ॥ ॥೦೩-೧೮॥

ಅಣುಮಹತ್ತಿನೊಳಿಪ್ಪ ಘನಪರಮಾಣುವಿನೊಳಗಡಗಿಸುವ ಸೂಕ್ಷ್ಮವ ।
ಮುಣುಗಿಸುವ ತೇಲಿಸುವ ಸ್ಥೂಲಗಳವನ ಮಾಯವಿದು ॥
ಧನುಜರಕ್ಕಸರೆಲ್ಲರಿವನೊಳು । ಮುನಿದು ಮಾಡುವದೆನಲೂಖಲ ।
ಒನಕೆಗಳು ಧಾನ್ಯಗಳ ಹಣಿವಂದದಲಿ ಸಂಹರಿಪ ॥ ॥೦೩-೧೯॥

ದೇವ ಮಾನವ ದಾನವರು ಎಂದೀ ವಿಧದಲಾವಾಗಲಿಪ್ಪರು ।
ಮೂವರೊಳಗಿವಗಿಲ್ಲ ಸ್ನೇಹೋದಾಸೀನ ದ್ವೇಷ ॥
ಜೀವರಧಿಕಾರಾನುಸಾರದಲೀವ ಸುಖ ಸಂಸಾರ ದುಃಖವ ।
ತಾ ಉಣದಲವರವರಿಗುಣಿಸುವ ನಿರ್ಗತಾಶನನು ॥ ॥೦೩-೨೦॥

ಎಲ್ಲಿ ಕೇಳಿದರೆಲ್ಲಿ ನೋಡಿದ|ರೆಲ್ಲಿ ಬೇಡಿದರೇಲ್ಲಿ ನೀಡಿದ |
ರಲ್ಲಿ ಓಡಿದರಲ್ಲಿ ಆಡಿದರೆಲ್ಲಿ ಇರುತಿಹನು ||
ಬಲ್ಲಿದರಿಗತಿಬಲ್ಲಿದನು ಸರಿ|ಯಿಲ್ಲ ಇವಗಾವಲ್ಲಿ ನೋಡಲು |
ಖುಲ್ಲ ಮಾನವರೊಲ್ಲನಪ್ರತಿಮಲ್ಲ ಜಗಕೆಲ್ಲ || ||೦೩-೨೦||

ತಪ್ತ ಲೋಹವು ನೋಳ್ಪ ಜನರಿಗೆ | ಸಪ್ತಜಿಹ್ವನ ತೆರದಿ ತೋರ್ಪುದು |
ಲುಪ್ತಪಾವಕ ಲೋಹ ಕಾಂಬುದು ಪೂರ್ವದೋಪಾದಿ ||
ಸಪ್ತವಾಹನ ನಿಖಿಲ ಜನರೊಳು | ವ್ಯಾಪ್ತನಾದುದರಿಂದ ಸರ್ವರು |
ಆಪ್ತರಾಗಿಹರೆಲ್ಲ ಕಾಲದಿ ಹಿತವ ಕೈಕೊಂಡು || ||೦೩-೨೧||

ವಾರಿದನು ಮಳೆಗರೆಯೆ ಬೆಳೆದಿಹ | ಭೂರುಹಂಗಳ ಚಿತ್ರ ಫಲರಸ |
ಬೇರೆ ಬೇರಿಪ್ಪಂತೆ ಬಹುವಿಧ ಜೀವರೊಳಗಿದ್ದು ||
ಮಾರಮಣನವರವರ ಯೋಗ್ಯತೆ | ಮೀರದಲೆ ಗುಣಕರ್ಮಗಳನು |
ಸಾರ ನಡೆಸುವ ದೇವನಿಗೆ ವೈಷಮ್ಯವೆಲ್ಲಿಹುದೋ || ||೦೩-೨೩||

ವಾರಿಜಾಪ್ತನ ಕಿರಣಮಣಿಗಳ | ಸೇರಿ ತತ್ತದ್ವರ್ಣಗಳನು ವಿ |
ಕಾರಗೈಸದೆ ನೋಳ್ಪರಿಗೆ ಕಂಗೊಳಿಸುವಂದದಲಿ |
ಮಾರಮಣ ಲೋಕತ್ರಯದೊಳಿಹ | ಮೂರು ವಿಧ ಜೀವರೊಳಗಿದ್ದು ವಿ |
ಹಾರಮಾಡುವನವರ ಯೋಗ್ಯತೆ ಕರ್ಮವನುಸರಿಸಿ || ||೦೩-೨೪||

ಜಲವನಪಹರಿಸುವ ಘಳಿಗೆಬ|ಟ್ಟಲನುಳಿದು ಜ್ಞಘಾಂತೇ ಕೈಪಿಡಿ |
ದೆಳೆದು ಹೊಡೆವಂದದಲಿ ಸಂತತ ಕರ್ತೃ ತಾನಾಗಿ ||
ಹಲಧರಾನುಜ ಪುಣ್ಯಪಾಪದ | ಫಲಗಳನು ದೇವಾಸುರರ ಗಣ |
ದೊಳು ವಿಭಾಗವ ಮಾಡಿ ಉಣಿಸುತ ಸಾಕ್ಷಿಯಾಗಿಪ್ಪ || ||೦೩-೨೫||

ಪೊಂದಿ ಕೊಂಡಿಹ ಸರ್ವರೊಳು ಸಂ|ಬಂಧವಾಗದೆ ಸಕಲಕರ್ಮವ |
ರಂದದಲಿ ತಾ ಮಾಡಿ ಮಾಡಿಸಿ ತತ್ಫಲಗಳುಣದೆ ||
ಕುಂದದಣು ಮಹತ್ತೆನಿಪ ಘಟ|ಮಂದಿರದಿ ಸರ್ವತ್ರ ತುಂಬಿಹ |
ಬಾಂದಳದ ತೆರನಂತೆ ಇರುತಿಪ್ಪನು ರಮಾರಮಣ || ||೦೩-೨೬||

ಕಾದ ಕಬ್ಬಿಣ ಹಿಡಿದು ಬಡಿಯಲು | ವೇದನೆಯು ಲೋಹಗಳಿಗಲ್ಲದೆ |
ಆದುದೇನೈ ಅನಳಗಾ ವ್ಯಥೆ ಏನು ಮಾಡಿದರು |
ಆದಿದೇವನು ಸರ್ವಜೀವರ | ಕಾದುಕೊಂಡಿಹನೊಳಹೊರಗೆ ದು: |
ಖಾದಿಗಳು ಸಂಬಂಧವಾಗುವವೇನೋ ಚಿನ್ಮಯಗೆ || ||೦೩-೨೭||

ಮಳಲ ಮನೆಗಳ ಮಾಡಿ ಮಕ್ಕಳು । ಕೆಲವು ಕಾಲದಲಾಡಿ ಮೋದದಿ ।
ತುಳಿದು ಕೆಡಿಸುವ ತೆರದಿ ಲಕುಮೀರಮಣ ಲೋಕಗಳ ॥
ಹಲವು ಬಗೆಯಲಿ ನಿರ್ಮಿಸುವ ನಿಶ್ಚಲನು ತಾನಾಗಿದ್ದು ಸಲಹುವ ।
ಎಲರುಣಿಯವೋಲ್ ನುಂಗುವಗೆ ಎಲ್ಲಿಹುದೋ ಸುಖದುಃಖ ॥ ||೦೩-೨೮||

ವೇಷ ಭಾಷೆಗಳಿಂದ ಜನರ ಪ್ರಮೋಷಗೈಸುವ ನಟಪುರುಷನೋಲ್ ।
ದೋಷದೂರನು ಲೋಕದೊಳು ಬಹುರೂಪ ಮಾತಿನಲಿ ॥
ತೋಷಿಸುವನವರವರ ಮನದಭಿಲಾಷೆಗಳ ಪೂರೈಸುತನುದಿನ ।
ಪೋಷಿಸುವ ಪೂತಾತ್ಮ ಪೂರ್ಣಾನಂದ ಜ್ಞಾನಮಯ ॥ ||೦೩-೨೯||

ಅಧಮ ಮಾನವನೋರ್ವ ಮಂತ್ರೌಷಧಗಳನು ತಾನರಿತು ಪಾವಕ ।
ಉದಕಗಳ ಸಂಬಂಧವಿಲ್ಲದೆ ಇಪ್ಪನದರೊಳಗೆ ॥
ಪದುಮಜಾಂಡೋದರನು ಸರ್ವರ । ಹೃದಯದೊಳಗಿರೆ ಕಾಲಗುಣಕ ।
ರ್ಮದ ಕಲುಷ ಸಂಬಂಧವಾಗುವುದೇ ನಿರಂಜನಗೆ ॥ ||೦೩-೩೦||

ಒಂದು ಗುಣದೊಳನಂತ ಗುಣಗಳು । ಒಂದು ರೂಪದೊಳಿಹವು ಲೋಕಗ ।
ಳೊಂದು ರೂಪದಿ ಧರಿಸಿ ತದ್ಗತ ಪದಾರ್ಥದೊಳಹೊರಗೆ ॥
ಬಾಂದಳದವೋಲಿದ್ದು ಬಹು ಪೆಸರಿಂದ ಕರೆಸುತ ಪೂರ್ಣಜ್ಞಾನಾ ।
ನಂದಮಯ ಪರಿಪರಿ ವಿಹಾರವ ಮಾಡಿ ಮಾಡಿಸುವ ॥ ||೦೩-೩೧||

ಎಲ್ಲರೊಳು ತಾನಿಪ್ಪ ತನ್ನೊಳಗೆಲ್ಲರನು ಧರಿಸಿಹನು ಅಪ್ರತಿ ।
ಮಲ್ಲ ಮನ್ಮಥಜನಕ ಜಗದಾದ್ಯಂತಮಧ್ಯಗಳ ॥
ಬಲ್ಲ ಬಹುಗುಣಭರಿತ ದಾನವದಲ್ಲಣ ಜಗನ್ನಾಥ ವಿಠ್ಠಲ ।
ಸೊಲ್ಲ ಲಾಲಿಸಿ ಸ್ತಂಭದಿಂದಲಿ ಬಂದ ಭಕುತನಿಗೆ ॥ ||೦೩-೩೨||

ooooooooooooooooooooooooooooooooo